ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 03-01-2024 ರಂದು ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ವೈ ಎಸ್ ನ್ಯಾಯವಾದಿರವರಿಂದಃ

ಬಾಡ ಟಿಕ್ಕಾ -II ಗ್ರಾಮದ ಸರ್ವೆ ನಂ. 629/2 ಬಿ 2 ರಲ್ಲಿ ಕ್ಷೇತ್ರ 2 ಗುಂಟೆ ವಿಸ್ತೀರ್ಣದ ಜಮೀನು ನನ್ನ ಮಾಲಿಕತ್ವದ ಜಮೀನಾಗಿರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ನಾನು 2008-2009 ನೇ ಸಾಲಿನಲ್ಲಿ ಖರೀದಿ ಮಾಡಿರುತ್ತೇನೆ. ಸದರಿ ಜಮೀನು ಖರೀದಿ ಮಾಡುವ ಸಮಯದಲ್ಲಿ ಜಮೀನಿಗೆ ಸಂಬಂದಪಟ್ಟಂತೆ 11ಇ ನಕಾಶೆಯನ್ನು ತಯಾರಿಸಿರುತ್ತೇನೆ. ಸದರಿ 11ಇ ನಕಾಶೆಯನ್ನು ಸರ್ವೆ ಇಲಾಖೆಯವರು ಯಾವ ಆಧಾರದ ಮೇಲೆ ಮಾಡಿರುತ್ತಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಖರೀದಿ ಮಾಡುವ ಕಾಲಕ್ಕೆ ಸದರಿ ಜಮೀನಿನ ವಿಸ್ತೀರ್ಣ 2 ಗುಂಟೆ ಸರಿಯಾಗಿ ಇತ್ತು. ನನ್ನ ಜಮೀನಿನ ಉತ್ತರಕ್ಕೆ 12 ಅಡಿ ಅಗಲದ ದಾರಿಯ ಅಂಚು ಇರುತ್ತದೆ ಎಂದರೆ ಸರಿ. ನನ್ನ ಜಮೀನಿಗೆ ತಾಗಿಕೊಂಡು ಪಶ್ಚಿಮ ದಿಕ್ಕಿನಲ್ಲಿ ವಾದಿಗೆ ಸೇರಿದ ಸರ್ವೆ ನಂ. 629/2 ಬಿ1 ರ ಜಮೀನು ಇರುತ್ತದೆ ಎಂದರೆ ಸರಿ. ನಾನು ಜಮೀನನ್ನು ಖರೀದಿ ಮಾಡುವ ಕಾಲಕ್ಕೆ ಜಮೀನಿಗೆ ಆವರಣ ಗೋಡೆ ಇದ್ದಿರಲಿಲ್ಲ. ನಾನು ಮೇ-2011 ನೇ ಸಾಲಿನಲ್ಲಿ ನನ್ನ ಮತ್ತು ವಾದಿಯ ಜಮೀನಿನ ನಡುವೆ ಆವರಣ ಗೊಡೆ ನಿರ್ಮಾಣ ಮಾಡಿರುತ್ತೇನೆ ಎಂದರೆ ಸಾಕ್ಷಿಯು 2009-2010 ನೇ ಸಾಲಿನಲ್ಲಿ ನಾನು, ವಾದಿ ಮತ್ತು ಇತರ ಅಕ್ಕಪಕ್ಕದ ನಿವಾಸಿಗಳು ಕೂಡಿಕೊಂಡು ಎಲ್ಲರ ಸಮಕ್ಷಮ ಆವರಣ ಗೋಡೆಯನ್ನು ನಿರ್ಮಾಣ ಮಾಡಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ಆಸ್ತಿಯನ್ನು ಖರೀದಿ ಮಾಡುವ ಕಾಲಕ್ಕೆ ನಾನು ಅಳತೆ ಮಾಡಿರುವುದಿಲ್ಲ, ಆದರೆ ಮಾರಾಟಗಾರರು ಅಳತೆ ಮತ್ತು ಭೂಪರಿವರ್ತನೆ ಮಾಡಿ ಜಮೀನನ್ನು ನನಗೆ ಮಾರಾಟ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಆವರಣ ಗೋಡೆಯನ್ನು ನಿರ್ಮಾಣ ಮಾಡುವ ಕಾಲಕ್ಕೆ ವಾದಿಯು ತನ್ನ ಜಮೀನನ್ನು ಅತಿಕ್ರಮಣ ಮಾಡಿ ಆವರಣ ಗೊಡೆಯನ್ನು ನಿರ್ಮಾಣ ಮಾಡುತ್ತಿದ್ದಿರಿ ಎಂದು ನನ್ನಲ್ಲಿ ತಕರಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಜಮೀನಿನ ದಕ್ಷಿಣಕ್ಕೆ ಜಾನ್ ಡಿಸಿಲ್ವಾ ಇವರಿಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಾನ್ ಡಿಸಿಲ್ವಾ ಇವರು ವಾದಿಯ ವಿರುದ್ಧ ಇದೇ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಹೂಡಿದ್ದರು ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಸದರಿ ದಾವೆಯಲ್ಲಿ ಕೋರ್ಟ ಕಮೀಷನರ್ ನೇಮಕವಾಗಿ ಅವರು ವಾದಿಯ ಜಮೀನನ್ನು ಮತ್ತು ಸದರಿ ದಾವೆಯ ಜಾನ್ ಡಿಸಿಲ್ವಾ ಇವರಿಗೆ ಸೇರಿದ ಜಮೀನನ್ನು ಅಳತೆ ಮಾಡಲು ಬಂದಾಗ, ನಾನು ಈ ದಾವೆಯ ವಾದಿಗೆ ಸೇರಿದ ಎರಡು ಆಣೆ ಕ್ಷೇತ್ರದ ಜಮೀನನ್ನು ಒತ್ತುವರಿ ಮಾಡಿದ ಬಗ್ಗೆ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ದಿಃ 14-09-2016 ರಂದು



ವಾದಿಯು ತಾಲೂಕು ಕಚೇರಿಗೆ ಅರ್ಜಿಯನ್ನು ನೀಡಿ ದಾವಾ ಜಮೀನುಗಳನ್ನು ಅಳತೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಳತೆಯನ್ನು ಮಾಡುವ ಪೂರ್ವದಲ್ಲಿ ನನಗೆ ತಾಲೂಕು ಕಚೇರಿಯಿಂದ

ಭೂಮಾಪಕರು ನೋಟೀಸ ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಳತೆ ಮಾಡುವ ಸಮಯದಲ್ಲಿ ನಾನು ಸಹ ಹಾಜರಿದ್ದೆನು ಎಂದರೆ ಸರಿಯಲ್ಲ. ಹಾಗೆ ಸರ್ವೆ ಮಾಡುವ ಕಾಲಕ್ಕೆ ವಾದಿಯರಿಗೆ ಸೇರಿದ ಜಮೀನಿನ ಸರ್ವೆ ನಂ. 629/2 ಬ 1 ರಲ್ಲಿ ಪೂರ್ವದಿಕ್ಕಿನ ಗುಂಟಾ 1.20 ಮೀ ಅಗಲದ 2 ಆಣೆ ವಿಸ್ತೀರ್ಣದ ಕ್ಷೇತ್ರವನ್ನು ನಾನು ಅತಿಕ್ರಮಣ ಮಾಡಿರುತ್ತೇನೆ ಎಂಬುದು ಸರ್ವೆಯಲ್ಲಿ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಸರ್ವೆಯ ವಿರುದ್ಧ ನಾನು ಎಡಿಎಲ್ ಆರ್ ಕಚೇರಿ ಕಾರವಾರ ಇಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿ ದಾಖಲು ಮಾಡಿದ ನಂತರ ಎಡಿಎಲ್ ಆರ್ ಕಾರವಾರ ಇವರು ದಾವಾ ಜಮೀನುಗಳಿಗೆ ಬಂದು, ಸ್ಥಳ ಪರಿಶೀಲನೆ ಮಾಡಿ, ಸರ್ವೆ ಕಾರ್ಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಸದರಿ ಎಡಿ ಎಲ್ ಆರ್ ಕಾರವಾರ ಇವರು ವಾದಿಯ ಮತ್ತು ನಮ್ಮ ಜಮೀನನ್ನು ಸ್ಥಳ ಪರಿಶೀಲನೆ ಮಾಡಲು ಬಂದ ಸಮಯದಲ್ಲಿ ನಾನು ಅವರನ್ನು ನನಗೆ ಸೇರಿದ ಜಮೀನನ್ನು ಅಳತೆ ಮಾಡುವಂತೆ ತುಂಬಾ ವಿನಂತಿಸಿಕೊಂಡರೂ ಸಹಿತ ಸದರಿ ಎಡಿ ಎಲ್ ಆರ್ ಕಾರವಾರ ಇವರು ನಿಮ್ಮ ಜಮೀನು ಬಿನ್ ಶೆತ್ಗಿ ಆಗಿದ್ದು, ಸರಿ ಇದೆ ಎಂದು ಹೇಳಿ ಅಳತೆ ಮಾಡದೆ ಹೋಗಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಎಡಿ ಎಲ್ ಆರ್ ಕಾರವಾರ ಇವರು ಸ್ಥಳ ಪರಿಶೀಲನೆ ಮಾಡಿ, ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ವರದಿಯನ್ನು ಎಡಿಎಲ್ ಆರ್ ಇನ್ನೂ ಸಹ ನೀಡಿರುವುದಿಲ್ಲ. ಎಡಿ ಎಲ್ ಆರ್ ಕಾರವಾರ ಇವರು 1.75 ಆಣೆ ವಿಸ್ತೀರ್ಣದ ಜಮೀನು ಅತಿಕ್ರಮಣ ಮಾಡಿರುತ್ತಾರೆ ಎಂದು ವರದಿಯನ್ನು ನೀಡಿರುತ್ತಾರೆ. ಸಾಕ್ಷಿಯು ಸ್ವತಃ ಸದರಿ ವರದಿಯ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿದ್ದು, ಅದು ಇನ್ನೂ ಇತ್ಯರ್ಥವಾಗಿರುವುದಿಲ್ಲ ಎಂದು ಉತ್ತರಿಸುತ್ತಾರೆ.

ಈ ಹಂತದಲ್ಲಿ ವಾದಿ ಪರ ನ್ಯಾಯಾವಾದಿರವರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**